3700(4345); ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ); ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ; ಆ ಕುರಿತಾದ ಕ್ರಿಯಾ ಯೋಜನೆಗಳ ವಿವರಗಳೇನು;

ಆ) ಹಿಂದುಳಿದ ಪ್ರದೇಶವಾದ ಬಾಗಲಕೋಟೆ ಪ್ರದೇಶಕ್ಕೆ (ಕ್ಷೇತ್ರ) ಎಷ್ಟು ಹೊಸ ಪ್ರೌಢಶಾಲೆಗಳನ್ನು ಸರ್ಕಾರ ಮಂಜೂರು ಮಾಡಿದೆ, ಕ್ಷೇತ್ರದ ಅತ್ಯಗತ್ಯ ಬೇಡಿಕೆ ಎಷ್ಟು;

ಇ) ಶೈಕ್ಷಣಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಬಾಗಲಕೋಟೆ ಕ್ಷೇತ್ರಕ್ಕೆ ಕನಿಷ್ಟ 05 ನೂತನ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) 2005–06ನೇ ಸಾಲಿನ ಉಪ ಮುಖ್ಯಮಂತ್ರಿಯವರ ಆಯವ್ಯಯದ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ.

"ಡಾ॥ ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ಎಲ್ಲಾ 114 ತಾಲ್ಲೂಕುಗಳಲ್ಲಿ ನೂತನ ಪ್ರೌಢಶಾಲೆಗಳನ್ನು 2005–06ನೇ ಸಾಲಿನಲ್ಲಿ ತೆರೆಯಲು ಉದ್ದೇಶಿಸಿದ್ದೇನೆ."

ಅದರಂತೆ 114 ಪ್ರೌಢಶಾಲೆಗಳನ್ನು 2005–06ನೇ ಸಾಲಿನಿಂದ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಲಾಗಿದೆ.

ಆ) ಸರ್ಕಾರದ ದಿನಾಂಕ: 17.05.05ರ ಆದೇಶ ಸಂಖ್ಯೆ: ಇಡಿ 07 ಎಸ್ಇಎಸ್ 2005ರಲ್ಲಿ ಬಾಗಲಕೋಟೆ ಜಿಲ್ಲೆಗೆ 03 ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ. ಬಾಗಲಕೋಟೆ ತಾಲ್ಲೂಕು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿಲ್ಲವಾದ್ದರಿಂದ ಆ ತಾಲ್ಲೂಕಿಗೆ ಹೊಸ ಸರ್ಕಾರಿ ಪ್ರೌಢಾಶಾಲೆಯನ್ನು ಮಂಜೂರು ಮಾಡಿಲ್ಲ.

ಇ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಇದಕ್ಕೆ ಅವಕಾಶವಿಲ್ಲ.

3701(4716); ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ); ಮಾನ್ಯ ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಹಳ್ಳಿಗಳ ಸಂಖ್ಯೆ ಎಷ್ಟು; ಅವುಗಳು ಯಾವುವು;

ಆ) ಕುಡಿಯುವ ನೀರಿನ ಪೂರೈಕೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ನದಿ ಮೂಲಗಳು ಇದ್ದರೂ ಖಾಯಂ ಹಾಗೂ ಸಮರ್ಪಕ ನೀರಿನ ಯೋಜನೆಗಳನ್ನು ಕೈಗೊಂಡು ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ನಿಗದಿತ ಹಾಗೂ ಸಕಾಲಿಕ ಕ್ರಮಗಳೇನು; ಅವುಗಳನ್ನು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ ಒಟ್ಟು 15 ಗ್ರಾಮಗಳು ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತವೆ. ಈ ಗ್ರಾಮಗಳು ನೀತಿಮನಿ, ರಾಂಪುರ, ಆರ್.ಪಿ.ತಿಮ್ಮಾಪುರ, ಬಿಲ್‌ಕೆರೂರ, ಅಚನೂರು, ಬೋಡನಾಯಕನದಿನ್ನಿ, ದೇವಲಾಪುರ, ಸಂತೆಗುಂಡಾರ, ಹಳ್ಳೂರು, ಭಗವತಿ, ಭೈರಮಟ್ಟಿ, ಚೌಡಾಪುರ, ಮುಗಳೊಳ್ಳಿ ಎಲ್.ಟಿ. ಬೇವೂರು.

ಆ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹಾಲಿಯಿರುವ ಯೋಜನೆಗಳನ್ನು ದುರಸ್ತಿಗೊಳಿಸಿ ಪುನಃಶ್ಚೇತನಗೊಳಿಸುವುದು, ಮುಂದುವರಿದ ಯೋಜನೆಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಿ ಕಾರ್ಯಗತಗೊಳಿಸುವುದು, ಕೊಳವೆ ಬಾವಿಗಳನ್ನು ಸ್ವಚ್ಚಗೊಳಿಸುವುದು, ಆಳ ಹೆಚ್ಚಿಸುವುದು, ಅನಿವಾರ್ಯವಾದಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು, ಹೈಡ್ರೊಫ್ಯಾಕ್ಚರಿಗೊಳಿಸುವುದು, ಅಗತ್ಯಯನುಸಾರ ಖಾಸಗಿ ಬೋರ್‌ವೆಲ್‌ಗಳನ್ನು ಬಳಸುವುದು ಮತ್ತು ತುರ್ತು ಸಂದರ್ಭಗಳಲ್ಲಿ ಸಾಗಾಣಿಕೆ ಮುಖೇನ ನೀರು ಪೂರೈಸುವಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಸಲುವಾಗಿ ತಾಲ್ಲೂಕು ಮಟ್ಟದ ಕಾರ್ಯಪಡೆಯನ್ನು ರಚಿಸಲಾಗಿದೆ.

ಇ) 1. ಘೂ ಮೇಲ್ಪ್ಪ ಜಲವನ್ನು ಉಪಯೋಗಿಸಿಕೊಂಡು ಶಿರೂರು ಮತ್ತು ಮೂರು ಗ್ರಾಮಗಳು ಕಲಾದಾಗಿ ಮತ್ತು 9 ಗ್ರಾಮಗಳು, ಲಪಳೇಶ್ವರ ಮತ್ತು 9 ಗ್ರಾಮಗಳು, ನಾಯಕನಗಲಿ ಮತ್ತು ಹತ್ತು ಗ್ರಾಮಗಳಿಗೆ ಖಾಯಂ ಆಗಿ ನದಿ ನೀರು ಸರಬರಾಜು ಮಾಡಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಲಭ್ಯವಾಗುವ ಲಭ್ಯತೆ ಆಧಾರದ ಮೇಲೆ ಆದ್ಯತೆ ಮೇರೆಗೆ [illegible]

2. ಕೆ.ಯು.ಡಬ್ಲ್ಯು.ಎಸ್. ನಿಂದ ಗುಳೆದಗುಡ್ಡ ನೀರು ಸರಬರಾಜು ಯೋಜನೆಯಡಿ 254 MLD ನೀರನ್ನು ಸದರಿ ಹಳ್ಳಿಗಳಿಗೆ ಒದಗಿಸಲು ಯೋಜನೆಯಲ್ಲಿ ಅಳವಡಿಸುವಂತೆ ವಿನಂತಿ ಮಾಡಲಾಗಿದೆ ಹಾಗೂ ಈ ಜಿಲ್ಲೆಯ ಜಲ ನಿರ್ಮಲ ಯೋಜನೆಯ ವ್ಯಾಪ್ತಿಯಲ್ಲಿ ಬರುವುದರಿಂದ ತ್ವರಿತಗತಿಯಲ್ಲಿ ಯೋಜನೆ ಅನುಷ್ಠಾನಗೊಳಿಸಲು 500.00 ಲಕ್ಷದ ಯೋಜನೆಗೆ ತಾಂತ್ರಿಕ ಒಪ್ಪಿಗೆ ಪಡೆಯಲಾಗಿದೆ. ಗ್ರಾಮಸ್ಥರಿಂದ, ವಂತಿಗೆ ಸಂಗ್ರಹಣೆ ಪ್ರಗತಿಯಲ್ಲಿದೆ.

3702(4717); ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ); ಮಾನ್ಯ ಶ್ರೀ ಅಂಜನಮೂರ್ತಿ (ವಸತಿ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಲ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ 2004–05ನೇ ಸಾಲಿನಲ್ಲಿ ಎಷ್ಟು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ; ಪೂರ್ಣ ವಿವರ ನೀಡುವುದು;

ಇ) ಕಲಘಟಗಿ ಕ್ಷೇತ್ರದಲ್ಲಿ ನಿರ್ಮಲ ಜ್ಯೋತಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆಯೇ; ವಿವರ ನೀಡುವುದು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ) ಹೌದು.

ಆ) 2002–03ನೇ ಸಾಲಿನಲ್ಲಿ ಮೊದಲನೇ ಹಂತದ ನಿರ್ಮಲ ಜ್ಯೋತಿ ಯೋಜನೆಯಡಿ 21 ಪ್ರಥಮ ದರ್ಜೆ ನಗರಗಳ ಉನ್ನತೀಕರಣ ಕಾಮಗಾರಿ ಪ್ರಾರಂಭವಾಗಿದ್ದು, ಈ ಕಾಮಗಾರಿಗಳು 2003–04 ಹಾಗೂ 2004–05 ರಲ್ಲೂ ಮುಂದುವರಿದಿದೆ. 21 ಪ್ರಥಮ ದರ್ಜೆ ನಗರಗಳ ಪಟ್ಟಿಯ ವಿವರಗಳನ್ನು ಲಗತ್ತಿಸಿದೆ.

ಇ) ಈ ಯೋಜನೆಯನ್ನು ರಾಜ್ಯದ 21 ಪ್ರಥಮ ದರ್ಜೆ ನಗರಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲು ಮಂಜೂರಾಗಿದ್ದು, ಕಲಘಟಗಿ ವಿಧಾನ ಸಭಾ ಕ್ಷೇತ್ರವು ಈ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ.